


# ಜನಮನ

## ಜನಾಭಿಪ್ರಾಯ ಸಮಾವೇಶ

ಮೇ ೧೩, ೨೦೧೬. ಶ್ರೀ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳು ತುಂಬಿದ ದಿನ. ಸಾಮಾನ್ಯವಾಗಿ ಸರ್ಕಾರಗಳು ತಮ್ಮ ವಾರ್ಷಿಕ ದಿನಾಚರಣೆಯನ್ನು ಸಂಭ್ರಮ ಸಡಗರಗಳಿಂದ ಸಾಧನೆಯ ಸಮಾವೇಶದ ಹೆಸರಿನಲ್ಲಿ ಅದ್ದೂರಿಯಾಗಿ ಆಚರಿಸುವುದು ವಾಡಿಕೆ. ಆದರೆ ಶ್ರೀ ಸಿದ್ದರಾಮಯ್ಯನವರ ಸರ್ಕಾರ ಮೂರನೆ ವರ್ಷದ ಆಚರಣೆಯನ್ನು ವಿಭಿನ್ನವಾಗಿ, ವಿನೂತನವಾಗಿ ನಾಡಿಗೇ ಮಾದರಿಯಾಗುವಂತೆ ಆಚರಿಸಿ ಜನಮನ ಸೆಳೆಯಿತು.

ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿರುವ ನಗರದ ಗಾಂಧೀ ಕೃಷಿ ವಿಜ್ಞಾನ ಕೇಂದ್ರದಲ್ಲಿ ನೂತನವಾಗಿ ತಲೆಯೆತ್ತಿರುವ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ಅಂದು ಸರ್ಕಾರ ವಿನೂತನ ಕಾರ್ಯಕ್ರಮವನ್ನು ಸಂಘಟಿಸಿತ್ತು. ಅಂದು ಸರ್ಕಾರದ ಮುಂಚೂಣಿ ಕಾರ್ಯಕ್ರಮಗಳಾದ ಅನ್ನಭಾಗ್ಯ, ಕ್ಷೀರಭಾಗ್ಯ, ಋಣಮುಕ್ತ, ಕ್ಷೀರಧಾರ, ಮೈತ್ರಿ, ಮನಸ್ವಿನಿ, ವಸತಿ, ವಿದ್ಯಾಸಿರಿ, ಇತ್ಯಾದಿ ಯೋಜನೆಗಳ ನಾಲ್ಕುನೂರಕ್ಕೂ ಹೆಚ್ಚು ಫಲಾನುಭವಿಗಳು ರಾಜ್ಯದ ಎಲ್ಲಾ ೩೦ ಜಿಲ್ಲೆಗಳಿಂದ ಆಗಮಿಸಿದ್ದರು. ನಾಡಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಸಚಿವ ಸಂಪುಟದೊಂದಿಗೆ ಈ ಫಲಾನುಭವಿಗಳ ಜೊತೆ ಮುಖಾಮುಖಿ ಸಂವಾದ ನಡೆಸಿ ಸರ್ಕಾರದ ಮೂರು ವರ್ಷಗಳ ಆಡಳಿತದ ಬಗ್ಗೆ ಜನಾಭಿಪ್ರಾಯ ಆಲಿಸಿದರು.

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಳೆದ ವರ್ಷದಿಂದ ತನ್ನ ಹೆಸರಿಗೆ ಅನುಗುಣವಾಗಿ ಜನಸಂಪರ್ಕ ಕಾರ್ಯ ನಿರ್ವಹಿಸಲು ಜನಮನ ಕಾರ್ಯಕ್ರಮ ಆರಂಭಿಸಿದೆ. ಇದರ ಮುಂದುವರೆದ ಭಾಗವಾಗಿ ಈ ವರ್ಷ ಕೂಡ ಜನಮನ ಸರ್ಕಾರದಿಂದ ಜನಾಬಿಪ್ರಾಯ ಸಮಾವೇಶವನ್ನು ಸಂಘಟಿಸಿತ್ತು. ಫಲಾನುಭವಿಗಳ ಜೊತೆಗೆ ಸಾರ್ವಜನಿಕರೂ, ವಿವಿಧ ವಲಯಗಳ ಗಣ್ಯರು, ರಾಜಕೀಯ ಧುರೀಣರು ಈ ಸಮಾವೇಶದಲ್ಲಿ ಭಾಗಿಯಾಗಿದ್ದರು.

೨೦೦೦ ಆಸನಗಳ ಅತ್ಯಾಧುನಿಕ ವಿಶಾಲ ಸಭಾಂಗಣದ ಸುತ್ತಮುತ್ತಲಿನ ಆವರಣದಲ್ಲಿ ಸರ್ಕಾರದ ಮುಂಚೂಣಿ ಕಾರ್ಯಕ್ರಮಗಳ ಪ್ರತಿಕೃತಿಗಳು ಪ್ರದರ್ಶನಗೊಂಡಿದ್ದವು. ಗ್ರಾಮೀಣ ಸೊಗಡಿನ ಜನಜೀವನ ಬಿಂಬಿಸುವ ಗ್ರಾಮೀಣ ಕಲಾಕೃತಿಗಳಿಂದ ಇಡೀ ವಾತಾವರಣ ಕಲಾವಂತಿಕೆಯಿಂದ ತುಂಬಿತುಳುಕುತ್ತಿತ್ತು.

ನಾಡಿನ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ತಮ್ಮ ಎಂದಿನ ಸರಳ, ಸಹಜವಾದ ಹತ್ತಿಬಟ್ಟೆಯ ಉಡುಗೆ ಪಂಚೆ ಮತ್ತು ಮೈಸೂರು ರೇಷ್ಮೆ ಶಾಲು ಧರಿಸಿ ಸಮಾವೇಶಕ್ಕೆ ಆಗಮಿಸಿದರು. ಜನಪದ ಕಲೆಗಳ ಸ್ವಾಗತದೊಂದಿಗೆ ಮುಖ್ಯಮಂತ್ರಿಗಳನ್ನು ಹಾಗೂ ಸಚಿವ ಸಂಪುಟದ ಸದಸ್ಯರೆಲ್ಲರನ್ನು ಸಮಾರಂಭಕ್ಕೆ ಬರಮಾಡಿಕೊಳ್ಳಲಾಯಿತು. ಸಮಾವೇಶದ ಸಭಾಂಗಣದೊಳಗೆ ಕುಳಿತಿದ್ದ ಜನಸ್ತೋಮದ ನಡುವೆಯೆ ನಡೆದು ಬಂದ ಶ್ರೀ ಸಿದ್ದರಾಮಯ್ಯನವರು ಜನಸಾಮಾನ್ಯರಿಗೆ ಮತ್ತು ಫಲಾನುಭವಿಗಳಿಗೆ ಹಸ್ತಲಾಘವ ನೀಡುತ್ತಾ ತಮ್ಮ ಸರಳತೆಯನ್ನು ಸಾದರಪಡಿಸಿದರು.

ವಿಶಾಲ ವೇದಿಕೆಯ ಮೇಲೆ ಮಧ್ಯದಲ್ಲಿ ಬೃಹತ್ ಎಲ್ಇಡಿ ಪರದೆಯಿತ್ತು. ಪರದೆಯ ಇಕ್ಕೆಲಗಳಲ್ಲಿ ಒಂದು ಕಡೆ ಶ್ರೀ ಸಿದ್ದರಾಮಯ್ಯನವರ ಹಾಗೂ ಸಚಿವ ಸಂಪುಟದ ಸದಸ್ಯರುಗಳು ಆಸೀನರಾಗಿದ್ದರೆ, ಇನ್ನೊಂದೆಡೆ ತಮ್ಮ ಅಭಿಪ್ರಾಯಗಳನ್ನು ಸರ್ಕಾರಕ್ಕೆ ತಿಳಿಸಲು ಬಂದಿದ್ದ ಫಲಾನುಭವಿಗಳು ಕುಳಿತಿದ್ದರು.

ಸುಮಾರು ನಾಲ್ಕು ಗಂಟೆಗಳಷ್ಟು ಕಾಲ ನಡೆದ ಈ ಜನಮನ ಜನಾಭಿಪ್ರಾಯ ಸಮಾವೇಶ ಸರ್ಕಾರದ ಮೂರನೇ ವರ್ಷಾಚರಣೆಯನ್ನು ಬಹುಕಾಲ ನೆನಪಿನಲ್ಲಿಟ್ಟುಕೊಳ್ಳುವಂತೆ ಸಂಯೋಜಿತವಾಗಿತ್ತು. ಅತ್ಯಾಧುನಿಕ ಗುಣಮಟ್ಟದ ಧ್ವನಿವರ್ಧಕದಲ್ಲಿ ನಾಡಗೀತೆ 'ಜಯ ಭಾರತ ಜನನಿಯ ತನುಜಾತೆ..' ಮೊಳಗುತ್ತಿದ್ದಂತೆಯೇ ಇಡೀ ಸಭಾಂಗಣದಲ್ಲಿ ಒಂದು ರೀತಿಯ ಚೈತನ್ಯ ಸಂಚಲನಗೊಂಡಿತು.

ಸಿದ್ದರಾಮಯ್ಯನವರು ತಮ್ಮ ಸಚಿವ ಸಂಪುಟದ ಸದಸ್ಯರೆಲ್ಲರ ಜೊತೆಗೆ ವೇದಿಕೆಯ ಮೇಲಕ್ಕೆ ಏರಿದಾಗ ಇಡೀ ಸಭಾಂಗಣವೇ ಮೆಚ್ಚಿ ಕರತಾಡನ ಮಾಡಿತು. ತಮ್ಮ ಸಚಿವ ಸಂಪುಟ ಸಹೋದ್ಯೋಗಿಗಳ ಜೊತೆ ಕುಳಿತ ಮುಖ್ಯಮಂತ್ರಿಗಳು ಸರ್ಕಾರವೇ ಜನಾಭಿಪ್ರಾಯ ಆಲಿಸಲು ಬಂದಿದೆ ಎನ್ನುವ ಭಾವನೆಯನ್ನು ಜನರಲ್ಲಿ ಮೂಡಿಸಿದರು.

ಜನಮನ ಸರ್ಕಾರದಿಂದ ಜನಾಭಿಪ್ರಾಯ ಸಮಾವೇಶದ ಉದ್ಘಾಟನೆ ಕೂಡ ವಿಶಿಷ್ಟವಾಗಿತ್ತು. ಮುಖ್ಯಮಂತ್ರಿಗಳು ಹಾಗೂ ಸಚಿವರುಗಳು ಜನಸಾಮಾನ್ಯರು, ಫಲಾನುಭವಿಗಳು, ಲಿಂಗ ಅಲ್ಪಸಂಖ್ಯಾತರ ಜೊತೆಗೂಡಿ ಸಾಂಪ್ರದಾಯಿಕವಾಗಿ ದೀಪ ಬೆಳಗಿಸುವ ಮೂಲಕ ಸಮಾವೇಶಕ್ಕೆ ಚಾಲನೆ ನೀಡಿದರು.

ಹಸಿವಿನ ಸಂಕಟ ಹಸಿದವರಿಗಷ್ಟೇ ಗೊತ್ತಾಗುತ್ತದೆ. ಕಡು ಬಡವರ ಹಸಿವನ್ನು ನಿವಾರಿಸಲು ಸರ್ಕಾರ ರೂಪಿಸಿರುವ ಅನ್ನಭಾಗ್ಯ ಯೋಜನೆಯ ನಡೆ ಸರಿಯಾಗಿದೆ. ಇದು ಮಾನವೀಯ ಅಂತಃಕರಣದ ಯೋಜನೆ.

**ಗುರುರಾಜ ಕರ್ಜಗಿ, ಶಿಕ್ಷಣ ತಜ್ಞರು**

